ಆ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಾಜ್ಯ ಹೆದ್ದಾರಿಗಳನ್ನು ನಿರ್ಮಿಸುವಾಗ ಪಾದಚಾರಿಗಳು ಸಂಚರಿಸಲು ನಗರ ಪ್ರದೇಶದಲ್ಲಿ ಇರುವ ರಸ್ತೆಗಳಲ್ಲಿ ಪಾದಚಾರಿಗಳಿಗೆ ಫುಟ್‌ಪಾತ್ ಹಾಗೂ ರಸ್ತೆಗಳನ್ನು ದಾಟಲು ಜೀಬ್ರಾ ಕ್ರಾಸಿಂಗ್‌ಗಳು, ಇತ್ಯಾದಿ ಸೂಚನಾ ಫಲಕಗಳನ್ನು IRC ಮತ್ತು MoRTH ಗಳಲ್ಲಿ ನಿಗದಿ ಪಡಿಸಿದ ನಿಯಮಗಳು ಹಾಗೂ Caution boards, Reflectory boards, Barricading, Construction of Safty signals Diversion Roads etc., ಗಳನ್ನು ಅಳವಡಿಸಿ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ. ಹಾಗೂ ರಸ್ತೆಯ ಇಕ್ಕೆಲಗಳಲ್ಲಿ 1 ರಿಂದ 2 ಮೀಟರ್ ಅಗಲಕ್ಕೆ ಹಾರ್ಡ್ ಶೋಲ್ಡರ್ಸ್‌ಗಳನ್ನು ಮಾಡಲಾಗಿದ್ದು, ಗ್ರಾಮ–ಪಟ್ಟಣ ಪರಿಮಿತಿಯಲ್ಲಿ ಎತ್ತರಿಸಿದ ಕರ್ಬ್‌ಗಳನ್ನು ಅಳವಡಿಸಿ ಫುಟ್‌ಪಾತ್‌ನ್ನು ನಿರ್ಮಿಸಿದ್ದು, ಹ್ಯಾಂಡ್ ಡ್ರೈವಿಂಗ್ಸ್‌ನ್ನು ಅಳವಡಿಸಿ ಟ್ರಾಫಿಕ್ ಸಿಗ್ನಲ್ಸ್‌ನ್ನು ಹಾಗೂ ಅಗತ್ಯ ಸೂಚನಾ ಫಲಕಗಳನ್ನು ಅಳವಡಿಸಿ ಪಾದಚಾರಿಗಳಿಗೆ ಅನುಕೂಲವಾಗುವಂತೆ ಜಾಗರೂಕತೆಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಮೇಲೆ ತಿಳಿಸಿದಂತೆ IRC ಮತ್ತು MoRTH ಗಳಲ್ಲಿ ನಿಗದಿಪಡಿಸಿದ ನಿಯಮಗಳಂತೆ ಜಾಗರೂಕತೆಯ ಕ್ರಮಗಳನ್ನು ಕೈಗೊಳ್ಳ ಲಾಗುತ್ತಿದೆ.

ಬಹುಮಡಿ ಕಟ್ಟಡಗಳಲ್ಲಿ ಲಿಫ್ಟ್‌ಗಳಲ್ಲಿ ಸಿಲುಕಿದ ಜನರಿಗೆ ರಕ್ಷಣೆ

535 (990) ಶ್ರೀ ನರೇಂದ್ರಬಾಬು ನ.ಲ (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಹುಮಹಡಿಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಆಗಿಂದಾಗ್ಗೆ ಕೆಟ್ಟು ಮಧ್ಯದಲ್ಲಿ ನಿಲ್ಲುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಹುಮಹಡಿಗಳಲ್ಲಿ ಲಿಫ್ಟ್‌ಗಳು ಕೆಟ್ಟು ಅಪಘಾತಕ್ಕೆ ಈಡಾದ ಸಂದರ್ಭದಲ್ಲಿ ಸಾವನ್ನಪ್ಪಿದ ಜನಸಾಮಾನ್ಯರಿಗೆ ಸರ್ಕಾರ ಎಷ್ಟು ಮೊತ್ತದ ಪರಿಹಾರ ಧನ ನೀಡುತ್ತಿದೆ;

ಇ) ಹಳೆಯ ಲಿಫ್ಟ್‌ಗಳನ್ನು ಬದಲಾವಣೆ ಮಾಡಿ ಹೊಸ ಲಿಫ್ಟ್‌ಗಳನ್ನು ಅಳವಡಿಸಲು ಸರ್ಕಾರ ಯಾವ ರೀತಿಯ ಕ್ರಮ ಜರುಗಿಸಿದೆ (ವಿವರ ನೀಡುವುದು);

ಈ) ಬಹುಮಹಡಿಗಳಲ್ಲಿ ಅಳವಡಿಸಿರುವ ಲಿಫ್ಟ್‌ಗಳು ಕೆಟ್ಟು ಮಧ್ಯದಲ್ಲಿ ನಿಂತಾಗ ಅದರಲ್ಲಿ ಸಿಲುಕಿರುವ ಜನರಿಗೆ ಸರ್ಕಾರ ಯಾವ ರೀತಿಯ ರಕ್ಷಣೆ ಒದಗಿಸಿದೆ (ವಿವರ ನೀಡುವುದು); ಈ ಕುರಿತು ಸರ್ಕಾರದಿಂದ ಆದೇಶ ಹೊರಡಿಸಲಾಗಿದೆಯೇ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಸರ್ಕಾರಿ ಬಹುಮಡಿಗಳಲ್ಲಿ ಲಿಫ್ಟ್‌ಗಳು ಕೆಟ್ಟು ಅಪಘಾತಕ್ಕೆ ಈಡಾದ ಯಾವುದೇ ಘಟನೆಗಳು ಸಂಭವಿಸಿರುವುದಿಲ್ಲ.

ಇ) ಬಹುಮಹಡಿ ಕಟ್ಟಡದ 3ನೇ ಹಂತದ 2 ಲಿಫ್ಟ್‌ಗಳು, ವಿಧಾನಸೌಧ, ಉಚ್ಚ ನ್ಯಾಯಾಲಯ, ಶಾಸಕರ ಭವನ, ರಾಜಭವನ, ಸಿಟಿ ಸಿವಿಲ್ ಕೋರ್ಟ್, ಟಿ.ವಿ.ಟವರ್, ವಿಕ್ಟೋರಿಯ ಆಸ್ಪತ್ರೆ ಸಂಕೀರ್ಣದಲ್ಲಿನ ಹಳೆಯ ಲಿಫ್ಟ್‌ಗಳ ಬದಲಾವಣೆಯ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಈ) ಬಹುಮಹಡಿಗಳಲ್ಲಿ ಅಳವಡಿಸಿದ ಲಿಫ್ಟ್‌ಗಳು ಕೆಟ್ಟು ಮಧ್ಯದಲ್ಲಿ ನಿಂತಾಗ ಲಿಫ್ಟ್‌ಗಳ ನಿರ್ವಹಣೆಯನ್ನು ಅವುಗಳ ಮೂಲ ತಯಾರಕರಾದ ಓಟೀಸ್, ಕೊನೆ, ಓಮೇಗಾ ಈ ಕಂಪನಿಗಳು ಸದರಿ ಲಿಫ್ಟ್‌ಗಳನ್ನು ತಕ್ಷಣವೇ ದುರಸ್ತಿಪಡಿಸಿ ಅನುಕೂಲ ಮಾಡಿಕೊಡಲಾಗುವುದು. ಅಲ್ಲದೆ ಎಲ್ಲಾ ಲಿಫ್ಟ್‌ಗಳಲ್ಲಿ ಆಪರೇಟರ್‌ಗಳನ್ನು ನೇಮಿಸಿದ್ದು, ಲಿಫ್ಟ್ ಕೆಟ್ಟು ನಿಂತಾಗ ಜನರನ್ನು ಹೊರ ತರಲು ಆಪರೇಟರ್‌ಗಳಿಗೆ ತರಬೇತಿ ನೀಡಲಾಗಿದೆ. ಈ ಕುರಿತಂತೆ ಸರ್ಕಾರದಿಂದ ಯಾವುದೇ ಆದೇಶವನ್ನು ಹೊರಡಿಸಲಾಗಿರುವುದಿಲ್ಲ.